**Licencing for Construction of Buildings**

159 - Sri A.K. Anantha Krishna (Shivajinagara) : Will the Hon'ble Minister for Urban Development be pleased to State.

a) *Whether the Government is aware that owners of the Multistoried non-residential and Commercial buildings in Bangalore city are invariably violating the conditions of the building licences for construction of the buildings with parking lots for Motor Vehicles and abusing them for commercial purposes there by adding to congestion for parking and traffic on road side causing accidents?*

b) *Will the Government consider the imperative need to treat such offences as cognisable and punish guilty according to charges of breach of faith and contract?*

c) *Will the Government amend the Bangalore Corporation Act and that of the BDA suitbly for treating such violations as cognisable offence and punish the offenders accordingly?*

Sri. Chowda Reddy (Minister for Urban Development):

a) Yes

b) There is no proposal to consider the violation of building plan as a cognizable offence. However under section 436-453 of the KMC Act, such unauthorised construction could be removed.

c) There is no such proposal. The existing law will be enforced in case of violation.

**ಜಿಲ್ಲೆಗಳ ಪುನರ್-ರಚನೆಯ ಬಗ್ಗೆ.**

181-ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರದ್) : ಮಾನ್ಯ ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಜಿಲ್ಲೆಗಳ ಪುನರ್-ರಚನೆ ಹಾಗೂ ಹೊಸ ಜಿಲ್ಲೆಗಳ ರಚನೆಯ ಬಗ್ಗೆ ಸರ್ಕಾರಕ್ಕೆ ವರದಿಯನ್ನು ನೀಡಲು ಇದುವರೆವಿಗೆ ಎಷ್ಟು ಸಮಿತಿಗಳನ್ನು ರಚಿಸಲಾಗಿದೆ; (ಪೂರ್ಣ ವಿವರಗಳನ್ನು ಒದಗಿಸುವುದು)*

ಆ) *ಈ ಸಮಿತಿಗಳು ಯಾವಾಗ ತಮ್ಮ ವರದಿಗಳನ್ನು ಸರ್ಕಾರಕ್ಕೆ ನೀಡಿವೆ;*

ಇ) *ಈ ವರದಿಗಳ ಆಧಾರದ ಮೇಲೆ ಸರ್ಕಾರ ಇದುವರೆವಿಗೂ ಯಾವುದೇ ಕ್ರಮಗಳನ್ನು ಕೈಗೊಳ್ಳದಿರಲು ಕಾರಣಗಳೇನು;*

ಈ) *ಈಗಲಾದರೂ ಸರ್ಕಾರವು ಈ ಸಮಿತಿಗಳು ನೀಡಿರುವ ವರದಿಯ ಮೇಲೆ ಕ್ರಮ ಕೈಗೊಳ್ಳುವುದೇ?*

ಶ್ರೀ ಧರ್ಮಸಿಂಗ್ (ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು) :

ಅ) ಈ ಕೆಳಕಂಡ ಮೂರು ಸಮಿತಿಗಳನ್ನು ರಚಿಸಿದೆ:

1. 1973ರಲ್ಲಿ ಶ್ರೀ ಎಂ. ವಾಸುದೇವರಾವ್ ಸಮಿತಿ,

2. 1984ರಲ್ಲಿ ಶ್ರೀ ಟಿ.ಎಂ. ಹುಂಡೇಕರ್ ಸಮಿತಿ,
3. 1986ರಲ್ಲಿ ಶ್ರೀ ಪಿ.ಸಿ. ಗದ್ದೀಗೌಡರ್ ಸಮಿತಿ.

ಆ) 1. ಶ್ರೀ ಎಂ. ವಾಸುದೇವರಾವ್ ಅವರ ಸಮಿತಿ 1975ರಲ್ಲಿ,
2. ಶ್ರೀ ಟಿ.ಎಂ. ಹುಂಡೇಕರ್ ಅವರ ಸಮಿತಿ 1986ರಲ್ಲಿ,
3. ಶ್ರೀ ಪಿ.ಸಿ. ಗದ್ದೀಗೌಡರ್ ಅವರ ಸಮಿತಿ 1987ರಲ್ಲಿ,
ವರದಿಗಳನ್ನು ಸಲ್ಲಿಸಿವೆ.

ಇ) ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್-ರಚನೆ ಬಗ್ಗೆ ರಚಿಸಲಾಗಿದ್ದ ಮೂರು ಸಮಿತಿಗಳು ನೀಡಿದ ವರದಿಯನ್ನು ಪರಿಶೀಲಿಸಿ, ಸೂಕ್ತ ಅಭಿಪ್ರಾಯ ನೀಡುವಂತೆ ಕೋರಿ ಸಚಿವ ಸಂಪುಟವು ಸಚಿವ ಸಂಪುಟ ಉಪ-ಸಮಿತಿಯನ್ನು ರಚಿಸಿತ್ತು. ಈ ಉಪ-ಸಮಿತಿಯು ವಿವಿಧ ಇಲಾಖಾ ಕಾರ್ಯದರ್ಶಿಗಳ ಸಮಿತಿಯನ್ನು ರಚಿಸಿ, ಹೊಸದಾಗಿ ಜಿಲ್ಲೆ ಹಾಗೂ ತಾಲ್ಲೂಕುಗಳನ್ನು ರಚಿಸುವಾಗ ಭೌಗೋಳಿಕ, ಆಡಳಿತಾತ್ಮಕ, ಆರ್ಥಿಕ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪರಿಶೀಲಿಸಿ, ಪ್ರಸ್ತಾವನೆ ಸಲ್ಲಿಸಲು ನಿರ್ದೇಶಿಸಿತ್ತು. ಅಧಿಕಾರಿಗಳ ಸಮಿತಿಯು ಸುದೀರ್ಘ ಪರಿಶೀಲನೆಯ ನಂತರ ಅಂತಿಮ ವರದಿಯನ್ನು ತಯಾರಿಸಿದೆ.

ನವೆಂಬರ್, 1992ರಲ್ಲಿ ಹೊಸ ಸರ್ಕಾರ ರಚನೆಯಾದ ನಂತರ ಹಿಂದಿನ ಸಚಿವ ಸಂಪುಟದ ಉಪ-ಸಮಿತಿಯು ಅಸ್ತಿತ್ವದಲ್ಲಿರುವುದಿಲ್ಲವಾದ ಕಾರಣ, ದಿನಾಂಕ: 3-8-93ರಂದು ಹೊಸದಾಗಿ ಸಚಿವ ಸಂಪುಟ ಉಪ-ಸಮಿತಿಯನ್ನು ರಚಿಸಲಾಗಿದೆ. ಹೊಸದಾಗಿ ರಚಿಸಲಾದ ಸಚಿವ ಸಂಪುಟದ ಉಪ-ಸಮಿತಿಯು ದಿನಾಂಕ: 7-9-93 ರಂದು ಸಭೆ ಸೇರಿ, ಜಿಲ್ಲಾ ವಿಂಗಡಣೆಯಿಂದ ಆಗುವ ಹೆಚ್ಚುವರಿ ವೆಚ್ಚದ ವಿವರ ಕೇವಲ ಕಂದಾಯ ಇಲಾಖೆಗೆ ಸೀಮಿತವಾಗಿ ಸಿದ್ಧಪಡಿಸಿರುವುದರಿಂದ, ಇತರೆ ಇಲಾಖೆಗಳಿಗೆ ಮುಖ್ಯವಾಗಿ ಜಿಲ್ಲಾ-ಪರಿಷತ್ತಗಳಿಗೆ ಆಗತ್ಯವಿರುವ ಹೆಚ್ಚುವರಿ ವೆಚ್ಚದ ವಿವರಗಳನ್ನು ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದೆ. ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್-ರಚನೆ ಮಾಡಿದರೆ ಎಲ್ಲಾ ಇಲಾಖೆಗಳು ಹೊಸದಾಗಿ ಸ್ಥಾಪಿಸಲಾಗುವ ಜಿಲ್ಲಾ ಕಛೇರಿಗಳು, ಉಪ-ವಿಭಾಗ ಕಛೇರಿಗಳು ಹಾಗೂ ತಾಲ್ಲೂಕು ಕಛೇರಿಗಳಿಗೆ ತಗಲುವ ಅಂದಾಜು ವೆಚ್ಚವನ್ನು ಆರ್ಥಿಕ ಇಲಾಖೆಯು ನೀಡಿದೆ.

ದಿನಾಂಕ: 3-8-93ರ ಆದೇಶ ಸಂ.ಆರ್ಡಿ 42 ಎಲ್‌ಆರ್‌ಡಿ 87, ರಲ್ಲಿ ರಚಿಸಲಾದ ಸಚಿವ ಸಂಪುಟದ ಉಪ-ಸಮಿತಿಗೆ ಹಿಂದಿನ ಮಾನ್ಯ ಕಂದಾಯ ಸಚಿವರು ಅಧ್ಯಕ್ಷರಾಗಿದ್ದು, ಈಗ ಹಿಂದಿನ ಮಾನ್ಯ ಕಂದಾಯ ಸಚಿವರು ಸಚಿವ ಸಂಪುಟದಲ್ಲಿ ಇಲ್ಲದೇ ಇರುವುದರಿಂದ ದಿನಾಂಕ: 3-8-93ರಲ್ಲಿ ರಚಿಸಲಾಗಿರುವ ಸಚಿವ ಸಂಪುಟದ ಉಪ-ಸಮಿತಿಯನ್ನು ಪುನರ್-ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸಚಿವ ಸಂಪುಟದ ಉಪ-ಸಮಿತಿಯನ್ನು ಪುನರ್-ರಚಿಸಿದ ನಂತರ, ಈ ಉಪ-ಸಮಿತಿಯು ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್-ರಚಿಸುವ ವಿಷಯವನ್ನು ಪರಿಶೀಲಿಸಿ, ನಿರ್ದಿಷ್ಟ ಪ್ರಸ್ತಾವನೆಯನ್ನು ಸಚಿವ ಸಂಪುಟಕ್ಕೆ ಸಲ್ಲಿಸುವುದು. ಸಚಿವ ಸಂಪುಟದ ತೀರ್ಮಾನದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಈ) ಪರಿಶೀಲನೆಯ ನಂತರ ಕ್ರಮ ಕೈಗೊಳ್ಳಲಾಗುವುದು.

**ಮಂಡ್ಯ ನಗರಸಭೆಗೆ ಅಭಿವೃದ್ಧಿ ಅನುದಾನ ಬಿಡುಗಡೆ ಮಾಡುವುದರ ಬಗ್ಗೆ**

63 - ಶ್ರೀ ಆತ್ಮಾನಂದ, ಎಂ.ಎಸ್ (ಮಂಡ್ಯ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?